‘ಮುಂದಿನ ಜೂನ್‌ಗೆ ನಂಗೆ ಅರವತ್ತೈದು ತುಂಬುತ್ತೆ. ಸಡನ್ನಾಗಿ ಏನಾದರೂ ಆಗಿ ಬಿಟ್ಟರೆ ಅವನು ಒಬ್ಬನೇ ಆಗಿಬಿಡ್ತಾನೆ ಅಂತ ಅನ್ನಿಸೋಕೆ ಶುರುವಾಗಿದೆ. ಈ ಮನೆ, ಬ್ಯಾಂಕಿನಲ್ಲಿ ಕೂಡಿಟ್ಟಿರೊ ದುಡ್ಡು, ಒಡವೆಗಳು ಎಲ್ಲವನ್ನೂ ಅನುಭವಿಸೋರೇ ಇರಲ್ಲ. ರಾತ್ರಿ ಎರಡು ಗಂಟೆ ಹೊತ್ತಿಗೆ ಎಚ್ಚರವಾಗಿ ಬಿಡುತ್ತೆ. ಆಮೇಲೆ ಏನೇನೊ ಆಲೋಚನೆಗಳು, ಹಳೆಯ ನೆನಪುಗಳು. ಎಲ್ಲ ಇದ್ದೂ ಏನೂ ಇಲ್ಲ ಅನ್ನೋ ಖಾಲಿತನ. ಅವಕ್ಕೆ ಲಾಜಿಕ್ಕೇ ಇರಲ್ಲ. ಐದು ಗಂಟೆ ಹೊತ್ತಿಗೆ ಸ್ವಲ್ಪ ನಿದ್ದೆ ಬರುತ್ತೆ. ತಿಂಗಳಿಗೊಮ್ಮೆ ರೆಗ್ಯುಲರ್ ಆಗಿ ಹೆಲ್ತ್ ಚೆಕಪ್ ಮಾಡಿಸಿಕೊಳ್ಳೀನಿ. ಆದರೂ ಹಾರ್ಟ್ ಅಟ್ಯಾಕ್ ಆಗಿಬಿಡುತ್ತೇನೊ ಅನ್ನೋ ಭಯ’ ಅನ್ನುತ್ತ ನಿಟ್ಟುಸಿರು ಬಿಟ್ಟರು. ಮತ್ತೇನು ಅಂತ ಐದಾರು ಸಲ ಕೇಳಿದರು. ಅವರು ಯಾಕೆ ಹೀಗೆ ಕೇಳ್ತಾರೆ ಅನ್ನೋದು ತನ್ಮಯಿಗೆ ಅರ್ಥ ಆಗಲಿಲ್ಲ. ‘ಜಯ್, ಮೇಡಂಗೆ ಮನೆ ತೋರಿಸು, ನಾನು ಕಾಫಿ ಮಾಡಿ ತರ್ತೀನಿ, ಡೈನಿಂಗ್ ಹಾಲ್‌ಗೆ ಬನ್ನಿ...’ ಅನ್ನುತ್ತ ಒಳಹೋದರು.

ಡೈನಿಂಗ್ ಟೇಬಲ್ ಪಕ್ಕ ಇದ್ದ ಓಪನ್ ಕಪಾಟಿನಲ್ಲಿ ಲಿಕ್ಕರ್ ಬಾಟಲುಗಳು! ಹಲವು ನಮೂನೆಯ ಗ್ಲಾಸುಗಳು. ಇರೋರು ಇಬ್ಬರೇ, ಕುಡಿಯೋರು ಯಾರು? ಅಮ್ಮನೆದುರು ಮಗ ಕುಡಿಯೋದು ಸಾಧ್ಯವಿಲ್ಲ. ಮನೆಗೆ ಬರೋ ಗೆಸ್ಟ್‌ಗಳಿಗಾಗಿ ಇರಬಹುದೇ?

‘ಹೊತ್ತಾಯಿತು ನಾನು ಹೊರಡ್ತೀನಿ...’ ಅನ್ನುತ್ತ ಹೊರಡುವ ಆತುರ ತೋರಿದಳು. ‘ಕಾಫಿನಾದ್ರೂ ಕುಡಿದು ಹೋಗಿ’ ಅಂತ ಉಪಚಾರ ಮಾಡಿದರು. ಎತ್ತರದ ನಿಲುವಿನ ಜಯದೇವನ ಅಮ್ಮ ಸಾಂಪ್ರದಾಯಿಕ ಒಡವೆಗಳನ್ನು ಧರಿಸುವ ಆಧುನಿಕ ಮಹಿಳೆಯ ಜಾಹೀರಾತಿಗೆ ಹೇಳಿ ಮಾಡಿಸಿದ ಮಾಡೆಲ್ ತರ ಇದ್ದಾರೆ ಅಂತ ತನ್ಮಯಿಗೆ ಅನ್ನಿಸಿತು.

★★★

ಮನೆಗೆ ಹೋದ ಮೇಲೆ ತನ್ಮಯಿ ಫೋನ್ ಮಾಡಬಹುದು ಅಂತ ಜಯದೇವ ನಿರೀಕ್ಷಿಸಿದ್ದ. ಮೂರು ದಿನ ಅವಳು ಕ್ಯಾಂಪಸ್ಸಿಗೆ ಹೋಗಲಿಲ್ಲ. ಯಾಕಿರಬಹುದು ಅಂತ ಯೋಚಿಸಿದ. ಫೋನ್ ಮಾಡೋಣವೇ ಅಂದುಕೊಂಡ. ಅನೇಕ ಸಲ ತನ್ಮಯಿ ಅವನ ಫೋನಿಗೆ ಉತ್ತರಿಸುತ್ತಿರಲಿಲ್ಲವಾದ್ದರಿಂದ ಸುಮ್ಮನಾದ. ಗಂಡನನ್ನು ಬಿಟ್ಟಿದ್ದಾರೆ ಅಂತ ಡಿಪಾರ್ಟ್‌ಮೆಂಟಿನಲ್ಲಿ ಕೆಲವರು ಮಾತಾಡಿಕೊಳ್ಳೋದನ್ನು ಕೇಳಿಸಿ ಕೊಂಡಿದ್ದ. ಯಾರ ಜತೆಗಾದರೂ ಎಲ್ಲಿಗಾದರೂ ಹೋಗಿರಬಹುದೇ? ಮಗ ಬಂದಿರಬಹುದೇ? ಆರೋಗ್ಯ ಕೆಟ್ಟಿರಬಹುದೇ? ಹೀಗೆ ಏನೇನೋ ಕಲ್ಪಿಸಿಕೊಂಡು ಯೋಚಿಸಿ ಜ್ವರ ಬರಿಸಿಕೊಂಡ.

‘ನಿಮ್ಮ ಮೇಡಂ ನನ್ನ ಬಗ್ಗೆ ಏನಾದರೂ ಹೇಳಿದರಾ’ ಅಂತ ಅವನಮ್ಮ ಒಂದೆರಡು ದಿನ ಅವನು ಮನೆಗೆ ಬರುತ್ತಿದ್ದಂತೆ ಕೇಳಿದರು. ‘ಇಲ್ಲ ಅವರು ಕ್ಯಾಂಪಸ್ಸಿಗೆ ಬಂದಿಲ್ಲ. ರಜಾ ಹಾಕಿದ್ದಾರಂತೆ. ಯಾಕೆ ಅನ್ನೋದು ಗೊತ್ತಿಲ್ಲ’ ಅಂತ ಹೇಳಿದ ಮೇಲೆ ಮತ್ತೆ ಕೇಳಲಿಲ್ಲ.

ಐದನೇ ದಿನ ತನ್ಮಯಿ ಬಂದರೂ ವಿಶ್ ಮಾಡಿದ್ದು ಬಿಟ್ಟರೆ ಜಯದೇವನ ಜತೆ ಮಾತಾಡಲಿಲ್ಲ. ಏನೋ ಟೆನ್ಷನ್‌ನಲ್ಲಿದ್ದಾರೆ ಅನ್ನಿಸಿತು. ಹತ್ತು ದಿನ ಕಳೆದ ಮೇಲೆ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬರೇ ಇದ್ದಾಗ ಎದುರು ಹೋಗಿ ಕೂತ. ಅವರು ಮಾತಾಡುವ ಮೂಡ್‌ನಲ್ಲಿದ್ದಾರೆ ಅನ್ನಿಸಿತು.

‘ನನ್ನ ಹಸ್ಬೆಂಡ್‌ಗೆ ಸಣ್ಣದೊಂದು ಸರ್ಜರಿ ಆಯ್ತು, ಅದಕ್ಕೇ ರಜಾ ಹಾಕಿದ್ದೆ. ಈಗ ಚೆನ್ನಾಗಿದ್ದಾರೆ...’ ಅಂತ ಅವನು ಕೇಳದಿದ್ದರೂ ಹೇಳಿದಳು.

ಆಮೇಲೆ, ‘ಜಯದೇವ್, ನಿಮ್ಮಮ್ಮ ನಂಗೆ ತುಂಬಾನೆ ಇಷ್ಟವಾದರು. ಅವ್ರಿಗೆ ಅರವತ್ತೈದು ವರ್ಷ ಅಂತ ಹೇಳೋಕೆ ಸಾಧ್ಯವಿಲ್ಲ... ಹೆಲ್ತೂ ಚೆನ್ನಾಗಿದೆ, ಸಡನ್ನಾಗಿ ಏನಾದರೂ ಆಗಿಬಿಡುತ್ತೆ ಅನ್ನೊ ಭಯ ಇದ್ದಂಗಿದೆ. ಯಾರಾದ್ರೂ ಸೈಕಿಯಾರ್ಟಿಸ್ಟ್ ಹತ್ರ ಕರಕೊಂಡು ಹೋಗಿ ಕೌನ್ಸೆಲಿಂಗ್ ಮಾಡಿಸಬಾರದಾ’ ಅನ್ನುತ್ತ ಮುಖ ನೋಡಿದಳು. ಅವನು ಸ್ವಲ್ಪ ಹೊತ್ತು ಸುಮ್ಮನಿದ್ದ. ‘ಯಾಕೆ